## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಡಿಕೇರಿ-ಕೊಡಗು

## ಸ್ಪೆಷಲ್(ಕರಪ್ಷನ್) ಕೇಸ್ ಸಂಖ್ಯೆ: 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲವಿನ ಡಿ ಸಿಲ್ವಾ | ಪ್ರಾಸಾಃ 5 |
| ಗಂಡನ ಹೆಸರು | : | ಬಿಪಿನ್ ಕುರಿಯನ್ | ಚಾಸಾಃ 7 |
| ವಯಸ್ಸು | : | 33 ವರ್ಷ | |
| ವೃತ್ತಿ | : | ದ್ವಿ.ದ.ಸ. ಡಿಡಿಪಿಐ ಆಫೀಸ್ | |
| ವಾಸ | : | ಮಡಿಕೇರಿ | |

ಸಾಕ್ಷಿಯನ್ನು ದಿನಾಂಕ **02-09-2023** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಮೇ 2012 ರಿಂದ ಈವರೆಗೂ ನಾನು ಡಿಡಿಪಿಐ ಕಛೇರಿಯಲ್ಲಿ ದಿ.ದ.ಸ ರಾಗಿ ಕರ್ತವ್ಯ ಸಲ್ಲಿಸಿರುತ್ತೇನೆ. ದಿಃ 23.05.2013 ರಂದು ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಬಂದು ಕೇಸಿನ ಸಂಬಂಧ ಮಹಜರ್ ಸಾಕ್ಷಿದಾರರಾಗಿ ಸಿಬ್ಬಂದಿಯನ್ನು ಕಳುಹಿಸಲು ಕೋರಿದ್ದು, ಆ ಪ್ರಕಾರ ಡಿಡಿಪಿಐ ರವರು ನನಗೆ ಮತ್ತು ಚಾಸಾ-6 ರವರಿಗೆ ಲೋಕಾಯುಕ್ತ ಪೊಲೀಸರಿಗೆ ಸಹಕರಿಸುವ ಬಗ್ಗೆ ನೇಮಿಸಿದರು. ಆನಂತರ ನಾನು ಮತ್ತು ಚಾಸಾ-6 ಲೋಕಾಯುಕ್ತ ಕಛೇರಿಗೆ ಹೋದೆವು. ಕಛೇರಿಯಲ್ಲಿ ಪಿ ಐ ರವರು ಇದ್ದರು ಮತ್ತು ಸಿಬ್ಬಂದಿ ಸಹ ಇದ್ದರು. ಪಿಐ ರವರು ಮಾರನೇ ದಿನ ಬೆ.5-30 ಗಂಟೆಗೆ ಕಛೇರಿಗೆ ಬರುವಂತೆ ತಿಳಿಸಿದರು. ಆ ಪ್ರಕಾರವನೇ ನಾನು ಮತ್ತು ಚಾಸಾ-7 ದಿಃ 24.05.2013 ರಂದು ಬೆ.5-45 ಗಂಟೆಗೆ ಹೋದೆವು. ಅಲ್ಲಿ ಪಿಐ ರವರು ರಂಗಸ್ವಾಮಿ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಅವರ ಅತ್ತಿಗೆ ಮನೆಯ ಶೋಧಕ್ಕಾಗಿ ಹೋಗಬೇಕಾಗಿದೆ ಅದಕ್ಕಾಗಿ ಸಹಕರಿಸಬೇಕಾಗಿ ಕೋರಿದರು. ಆ ಪ್ರಕಾರ ನಾವು ಮತ್ತು ಚಾಸಾ-7 ಲೋಕಾಯುಕ್ತ ಟೀಮ್ ನೊಂದಿಗೆ ದೇಚೂರಿನ ಕೆ ಎ ಕಮಲ ರವರ ಮನೆಗೆ ಬೆ.6-30 ಗಂಟೆಗೆ ಹೋದೆವು. ನಾವು ಮನೆ ಕಾಲಿಂಗ್ ಬೆಲ್ ಮಾಡಿದಾಗ ಕಮಲರವರು ಮನೆಯ ಹೊರಗೆ ಬಂದರು. ಆ ಸಂದರ್ಭದಲ್ಲಿ ಪಿಐ ರವರು ಕಮಲರವರಿಗೆ ಸರ್ಚ್ ವಾರೆಂಟನ್ನು ತೋರಿಸಿದರು. ಸದರಿ ಸರ್ಚ್ ವಾರೆಂಟ್ ಗೆ ಕಮಲ ಮತ್ತು ನನ್ನ ಸಹಿ ಪಡೆದರು. ಸರ್ಚ್

ವಾರೆಂಟನ್ನು ನಿಪಿ-187 ಎಂದು, ನನ್ನ ಸಹಿಯನ್ನು ನಿಪಿ-187(ಎ) ಎಂದು ಗುರುತಿಸಲಾಯಿತು. ಮನೆಯಲ್ಲಿ ಕಮಲ ಮತ್ತು ಅವರ ತಾಯಿ ಇದ್ದರು. ಅದೇ ಮನೆಯಲ್ಲಿ ಒಟ್ಟು 7 ರೂಂ ಗಳು ಇದ್ದವು. ಹಾಲ್ ನಲ್ಲಿ ಟಿಪಾಯಿ ದಿವಾನ ಮತ್ತು ರೂಂ ನಲ್ಲಿ ಮಂಚ ಇದ್ದವು ಮತ್ತು ಅಲ್ಮೆರ ಇತ್ತು. ಬೆಡ್ ರೂಂ ನಲ್ಲಿ ಗಾಡ್ರೆಜ್ ಬೀರ್ ಇತ್ತು. ಅದನ್ನು ಪರಿಶೀಲಿಸಿದಾಗ ಸ್ವಲ್ಪ ದಾಖಲೆಗಳು ಸಿಕ್ಕಿದವು. ಆರೇಳು ಚಿನ್ನಾಭರಣಗಳು ಇದ್ದವು ಅವುಗಳನ್ನು ಪರಿಶೀಲಿಸಿ ಅವನ್ನು ಕಮಲರವರಿಗೆ ವಾಪಸ್ಸು ಕೊಟ್ಟೆವು. ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ಅಮಾನತುಪಡಿಸಿಕೊಂಡರು. ಆ ಸಂದರ್ಭದಲ್ಲಿ ಅಮಾನತುಪಡಿಸಿಕೊಂಡ ಒಟ್ಟು 22 ದಾಖಲೆಗಳಲ್ಲು ಸಹ ನನ್ನ ಸಹಿ ಇರುತ್ತದೆ. ಆ ಎಲ್ಲಾ ದಾಖಲೆಗಳನ್ನು ಒಟ್ಟಾಗಿ ನಿಪಿ-188 ಎಂದು ಗುರುತಿಸಲಾಯಿತು. ನನ್ನ ಸಹಿಯನ್ನು ನಿಪಿ-188(ಎ) ಎಂದು ಗುರುತಿಸಲಾಯಿತು.

ಮತ್ತೊಂದು ರೂಂ ನಲ್ಲಿ ಸೂಟ್ ಕೇಸ್ ಇತ್ತು ಅದರಲ್ಲೂ 6 ದಾಖಲೆಗಳು ಇದ್ದವು. ಅವುಗಳನ್ನೂ ಸಹ ಲೋಕಾಯುಕ್ತ ಪೊಲೀಸರು ಅಮಾನತುಪಡಿಸಿಕೊಂಡರು ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ-189 ಎಂದು, ನನ್ನ ಸಹಿಯನ್ನು ನಿಪಿ-189(ಎ) ಎಂದು ಗುರುತಿಸಲಾಯಿತು. ಈ ಎಲ್ಲಾ ದಾಖಲೆಗಳನ್ನು ಅಮಾನುತಪಡಿಸಿಕೊಂಡ ಸಂದರ್ಭದಲ್ಲಿ ಪೊಲೀಸರು ಮಹಜರು ಕ್ರಮ ಜರುಗಿಸಿರುತ್ತಾರೆ ಅದನ್ನು ನಿಪಿ-190 ಎಂದು, ನನ್ನ ಸಹಿಯನ್ನು ನಿಪಿ-190(ಎ) ಎಂದು ಗುರುತಿಸಲಾಯಿತು.

ಕಮಲ ರವರು ಕರ್ನಾಟಕ ಬ್ಯಾಂಕ್‌ನಲ್ಲಿ ಲಾಕರ್ ಇರುವ ಬಗ್ಗೆ ತಿಳಿಸಿದರು. ಆನಂತರ ನಾವೆಲ್ಲರೂ ಸಹ ಕರ್ನಾಟಕ ಬ್ಯಾಂಕ್‌ಗೆ ಹೋಗಿ ಬ್ಯಾಂಕ್ ಮ್ಯಾನೇಜರ್ ಗೆ ವಿಷಯತಿಳಿಸಿದೆವು. ಕಮಲರವರು ಸಹ ಜೊತೆಯಲ್ಲಿ ಬಂದರು. ಲಾಕ್ ನಂಬರ್ 84 ನ್ನು ನಾನು, ಚಾಸಾ-6, ಕಮಲ, ಲೋಕಾಯುಕ್ತ ಪೊಲೀಸರು ಮತ್ತು ಬ್ಯಾಂಕ್ ಮ್ಯಾನೇಜರ್ ಸಮಕ್ಷಮ ಪರಿಶೀಲಿಸಿದೆವು. ಲಾಕರ್ ನಲ್ಲಿ ಕೆಲವು ದಾಖಲೆಗಳು ಇದ್ದವು. ಚಿನ್ನಾಭರಣ ಇತ್ತು ಮತ್ತು 4 ಲಕ್ಷ ನಗದು ಹಣ ಇತ್ತು. ಅದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿದ್ದು ಅದನ್ನು ಮುಮಾ-27 ಎಂದು ಗುರುತಿಸಲಾಯಿತು. (ಸಾಕ್ಷಿ ಅಮಾನತು ಸಮಯದಲ್ಲಿ 1000 ರೂ ಮುಖಬೆಲೆಯ 358 ನೋಟುಗಳು, 500 ರೂ ಮುಖಬೆಲೆಯ 84 ನೋಟುಗಳು ಇದ್ದವು ಎಂದು ತಿಳಿಸಿರುತ್ತಾರೆ. ಸದರಿ ನೋಟುಗಳನ್ನು ಕೇಂದ್ರ ಸರ್ಕಾರ ಅಮಾನ್ಯ ಮಾಡಿರುವ ಕಾರಣ ಅವುಗಳನ್ನು ನ್ಯಾಯಾಲಯದ ಅನುಮತಿ ಪಡೆದು ಹೊಸ ನೋಟುಗಳಿಗೆ ರೂಪಾಂತರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ).

ಆ ದಿನ ಅಮಾನತುಪಡಿಸಿಕೊಂಡ 22 ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ನ್ಯಾಯಾಲಯದಲ್ಲಿ ಗುರುತಿಸಿದ್ದೇನೆ.

1. ಚಿನ್ನದ ಅಡ್ಡಪಟ್ಟಿಗುಂಡು ಮುತ್ತಿನ ಸರ ಮುಮಾ-28 ಎಂದು,
2. ಕೊಕ್ಕೆ ತಾತಿ ಪೆಂಡೆಂಟ್ ನ್ನು ಮುಮಾ-29 ಎಂದು,
3. ಆನೆ ಬಾಲದ ಚಿನ್ನದ ಉಂಗುರ ವನ್ನು ಮುಮಾ-30 ಎಂದು,
4. ಕೆಕೆಕೆ ಇನ್ಸಿಲ್ ಇರುವ ಚಿನ್ನದ ಉಂಗುರ ವನ್ನು ಮುಮಾ-31 ಎಂದು,
5. ಎರಡು ಚಿನ್ನದ ಕಡಗವನ್ನು ಮುಮಾ-32 ಎಂದು,
6. ನಾಲ್ಕು ಚಿನ್ನದ ಬಳೆಗಳು ಮುಮಾ-33 ಎಂದು,
7. ಒಂದು ಬೆಳ್ಳಿಯ ಬಳೆ ಚಿನ್ನದ ನೀರನ್ನು ಲೇಪಿಸಿದೆ ಅದನ್ನು ಮುಮಾ-34 ಎಂದು,
8. ಎರಡು ಎಳೆ ಚಿನ್ನದ ಸರವನ್ನು ಹವಳದಗುಂಡು ಸೇರಿ ಮುಮಾ-35 ಎಂದು,
9. ಕೆಂಪು ಹರಳಿನ ನೆಕ್ಲೆಸ್ ಮುಮಾ-36 ಎಂದು,
10. ಚಿನ್ನದ ಸರ ಮತ್ತು ಪೆಂಡೆಂಟ್ ಮುಮಾ-37 ಎಂದು,
11. ಒಂದು ಜೊತೆ ಮುತ್ತಿನ ಓಲೆಗಳು ಮುಮಾ-38 ಎಂದು,
12. ಎರಡು ಚಿನ್ನದ ಬಳೆಗಳು ಮುಮಾ-39 ಎಂದು,
13. ಒಂದು ಬೆಳ್ಳಿಯ ಬಳೆ ಚಿನ್ನದ ನೀರನ್ನು ಲೇಪಿಸಿದೆ ಅದನ್ನು ಮುಮಾ-40 ಎಂದು,
14. ಚಿನ್ನದ ಮೂಗುತಿ ಮುಮಾ-41 ಎಂದು,
15. ಒಂದು ಜೊತೆ ಸಾಧ ಓಲೆ ಮುಮಾ-42 ಎಂದು,
16. ಬೆಳ್ಳಿ ಗೆಜ್ಜೆಯ ಒಂದು ತುಂಡು ಮತ್ತು ಕೊಂಡಿ ಮುಮಾ-43 ಎಂದು,
17. ಚಿನ್ನದ ಲೇಪನ ಮಾಡಿರುವ ಬೆಳ್ಳಿಯ ಸರ ಮುಮಾ-44 ಎಂದು,
18. ಚಿನ್ನದ ಸರ ಮತ್ತು ಕೃಷ್ಣ ಡಾಲರ್ ಮುಮಾ-45 ಎಂದು,
19. ಬಿಳಿ ಮತ್ತು ಕೆಂಪು ಮಿಶ್ರಿತ ಹರಳಿನ ಎರಡು ಓಲೆ ಮುಮಾ-46 ಎಂದು,
20. ಒಂದು ಚಿನ್ನದ ಉಂಗುರ ಮುಮಾ-47 ಎಂದು,
21. ಒಂದು ಜೊತೆ ಬೆಳ್ಳಿಯ ಗೆಜ್ಜೆ ಕಾಲು ಚೈನು ಮುಮಾ-48 ಎಂದು,
22. ಒಂದು ಬೆಳ್ಳಿಯ ಸೊಂಟದ ಕೀ ಚೈನು ಮುಮಾ-49 ಎಂದು ಗುರುತಿಸಲಾಯಿತು.

ಸದರಿ ಆಭರಣಗಳನ್ನು ಅಕ್ಕಸಾಲಿಗರು ತೂಕ ಮಾಡಿ ಅದು ಚಿನ್ನ ಅಥವಾ ಬೆಳ್ಳಿ ಎಂಬ ಬಗ್ಗೆ ಪರೀಕ್ಷೆ ಮಾಡಿರುತ್ತಾರೆ ಮತ್ತು ತೂಕ ಮತ್ತು ಬೆಲೆಯನ್ನು ಅಂದಾಜಿನಲ್ಲಿ ಹೇಳಿರುತ್ತಾರೆ.

ಬ್ಯಾಂಕ್ ಲಾಕರ್ ನಲ್ಲಿ ವಶಪಡಿಸಿಕೊಂಡ ದಾಖಲೆಗಳಿಗೆ ನನ್ನ ಸಹಿ ಇರುತ್ತದೆ. ಅವು 16 ದಾಖಲೆಗಳಿದ್ದು ಅವನ್ನು ಒಟ್ಟಾಗಿ ನಿಪಿ-191 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನಿಪಿ-191(ಎ) ಎಂದು ಗುರುತಿಸಲಾಯಿತು. ಈ ಸಂಬಂಧ ಪೊಲೀಸರು ಬ್ಯಾಂಕಿನಲ್ಲಿ ಮಹಜರು ಕ್ರಮ ಜರುಗಿಸಿರುತ್ತಾರೆ ಸದರಿ ಮಹಜರನ್ನು ನಿಪಿ-192 ಎಂದು, ನನ್ನ ಸಹಿಯನ್ನು ನಿಪಿ-192(ಎ) ಎಂದು ಗುರುತಿಸಲಾಯಿತು. ಲೋಕಾಯುಕ್ತ ಪೊಲೀಸರಿಗೆ ತನಿಖೆಗೆ ಸಹಕರಿಸಿದ ಬಗ್ಗೆ ಹಾಜರಾತಿ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲು- ಆರೋಪಿ ಪರ ವಕೀಲರಿಂದ:**

ಆರೋಪಿಪರ ವಕೀಲರು ಕಾಲವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಡಿಕೇರಿ- ಕೊಡಗು.